1990ನೇ ಇಸವಿಯ ಕರ್ನಾಟಕ ಸಚಿವರ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕ ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ, ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೇ ಮಾನ್ಯ ಮುಖ್ಯಮಂತ್ರಿಗಳ ಪರವಾಗಿ 1990ನೇ ಇಸವಿಯ ಕರ್ನಾಟಕ ಸಚಿವರ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ. ಎಂ. ವೀರಪ್ಪಮೊಯಿಲಿ (ಶಿಕ್ಷಣ, ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೇ, ಇದು ನಾಲ್ಕು ಅಂಶದ ತಿದ್ದುಪಡಿಯನ್ನು ಇದರಲ್ಲಿ ನಮೂದಿಸಲಾಗಿದೆ, ಒಂದನೆಯದಾಗಿ ಮಾನ್ಯ ಮುಖ್ಯಮಂತ್ರಿಯವರಿಗೆ ಸಲ್ಲಬೇಕಾದಂಥ ಸಮ್‌ಚ್ಯುರಿ ಅಲೋಯನ್ಸ್ ಏನಿದೆ ಅದನ್ನು ೧೦ ಸಾವಿರ ರೂಪಾಯಿಗಳಿಗೆ ಏರಿಸಲಾಗಿದೆ. ಮಂತ್ರಿಗಳಿಗೆ, ಡೆಪ್ಯುಟಿ ಮಿನಿಸ್ಟರುಗಳಿಗೆ ಸಂಬಂಧಪಟ್ಟ ಸಮ್‌ಚುರಿ ಅಲೋಯೆನ್ಸನ್ನು ೮ ಸಾವಿರಕ್ಕೆ ಏರಿಸಲಾಗಿದೆ. ಹೌಸ್ ರೆಂಟ್ ಅಲೋಯನ್ಸನ್ನು ೧ ಸಾವಿರದಿಂದ ೫ಸಾವಿರಕ್ಕೆ ಏರಿಸಲಾಗಿದೆ. ಮೂರನೆಯದು ಹ್ಞಈಟಿಂ ಢಘಬ್ಟೆಘಘ ಔಟಿ ಓಗಾಜೌಡಿಒಥಿಒಐಂ ಡಈ ೩೦೦ ಥಔಡಿಒಓಟಿ ಈಖ ಡಿಒಡಿಒಈಥ ಡಿಒಟ ಜಈಖಿಡಘಃ ಅಂದರೆ, ಕನ್‌ವೇಯನ್ಸ್ ಅಲೋಯನ್ಸ್ ತೆಗೆದು ಇದನ್ನು ಮಾತ್ರ ಕೊಡುವುದೆಂದು ನಿರ್ಣಯಿಸಲಾಗಿದೆ. ಡೈಲಿ ಅಲೋಯೆನ್ಸ್‌ನ್ನು ಔಟ್‌ಸೈಡ್ ದಿ ಸ್ಟೇಟ್ ಹೋದಾಗ ಅದನ್ನು ೨೫೦ ರೂಪಾಯಿಗಳಿಗೆ ಏರಿಸಬೇಕೆಂದೂ ಕೂಡ ಇದರಲ್ಲಿ ನಿರ್ಣಯಿಸಲಾಗಿದೆ. ಈ ಸೂಚನೆಗಳನ್ನು ತಿದ್ದುಪಡಿಯ ಮುಖಾಂತರ ನಮೂದಿಸಲಾಗಿದೆ.

ಶ್ರೀ ಎಸ್.ಹೆಚ್. ಕೌಜಲಗಿ : ಇನ್ನೂ ಕೆಲವು ವಿಚಾರಗಳನ್ನು ಇದರಲ್ಲಿ ಕಾಣಿಸಿಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ : ಇಲ್ಲಿ ತಿದ್ದುಪಡಿಯೆಂದರೆ ಅದೆ, ಫಂಗ್‌ಷನರೀಸ್‌ಗೆ ತಂದಂತೆ ಮೈಲೇಜನ್ನು ೨೫೦ರೂಪಾಯಿಂದ ೩೫೦ರೂಪಾಯಿಗಳಿಗೆ ಇದರಲ್ಲಿ ಏರಿಸಲಾಗಿದೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ "೧೯೯೦ನೇ ಇಸವಿಯ ಕರ್ನಾಟಕ ಸಚಿವರ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ಸಭೆ ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ ೨ರಿಂದ ೧೩ರ ವರೆಗೆ

ಅಧ್ಯಕ್ಷರು : "ಖಂಡ ೨ ರಿಂದ ೧೩ರ ವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 13ರ ವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಅಧ್ಯಕ್ಷರು : ಮಾನ್ಯ ಮಂತ್ರಿಗಳು 14ನೇ ಖಂಡಕ್ಕೆ ತಿದ್ದುಪಡಿಯನ್ನು ಸೂಚಿಸಿದ್ದಾರೆ. ಅವರು ಅದನ್ನು ಮಂಡಿಸಬೇಕು.

ಖಂಡ 14.

ಶ್ರೀ ಎಂ. ವೀರಪ್ಪ ಮೊಯಿಲಿ : 14ನೇ ಖಂಡಕ್ಕೆ ತಿದ್ದುಪಡಿಯನ್ನು ಸೂಚಿಸುತ್ತೇನೆ. ತಿದ್ದುಪಡಿ ಹೀಗಿದೆ :

CLAUSE 14

For Clause 14 of the said bill, the following shall be substituted:

"14. Amendment of Section 12:- In sub-section (2) of Section 12 of the principal Act:

(1) in clause (b) for the words " two rupees and fifty paise" the words "three rupees and fifty paise" shall be substituted;

(ii) in the first proviso to clause (d) for the words "one hundred and fifty rupees" the words "two hundred and fifty rupees" shall be substituted.

ಅಧ್ಯಕ್ಷರು : ತಿದ್ದುಪಡಿಯನ್ನು ಮಂಡಿಸಲಾಗಿದೆ : ತಿದ್ದುಪಡಿ ಹೀಗಿದೆ:

CLAUSE 14

For clause 14 of the said Bill, the following shall be substituted:

"14. Amendment of Section 12:- In sub-section (2) of Section 12 of the principal Act:

(i) in clause (b) for the words "two rupees and fifty paise" the words "three rupees and fifty paise" shall be substituted;

(ii) in the first proviso to clause (d) for the words "one hundred and fifty rupees" the words "two hundred and fifty rupees" shall be substituted.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಅಧ್ಯಕ್ಷರು : ಪ್ರಸ್ತಾವ ಹೀಗಿದೆ. "ತಿದ್ದುಪಡಿಯಾದ 14ನೇ ಖಂಡವು ವಿಧೇಯಕದ ಅಂಗವಾಗಿರಬೇಕು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ತಿದ್ದುಪಡಿಯಾದ 14ನೇ ಖಂಡವು ವಿಧೇಯಕದ ಅಂಗವಾಯಿತು).

ಅಧ್ಯಕ್ಷರು : ಮಾನ್ಯ ಮಂತ್ರಿಗಳು ಖಂಡ 1ಕ್ಕೆ ತಿದ್ದುಪಡಿಯನ್ನು ಸೂಚಿಸಿದ್ದಾರೆ. ಅದನ್ನು ಅವರು ಮಂಡಿಸಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೆ,ಖಂಡ 1ಕ್ಕೆ ಈ ಕೆಳಕಂಡ ತಿದ್ದುಪಡಿಯನ್ನು ಸೂಚಿಸುತ್ತಿದ್ದೇನೆ. ತಿದ್ದುಪಡಿ ಹೀಗಿದೆ:

CLAUSE 1

In sub-clause (2), for the words "it shall come into force at once", the words "It shall be deemed to have come into force from the first day of November, 1990", shall be substituted.

ಅಧ್ಯಕ್ಷರು : ತಿದ್ದುಪಡಿಯನ್ನು ಮಂಡಿಸಲಾಗಿದೆ. ತಿದ್ದುಪಡಿ ಹೀಗಿದೆ:

CLAUSE 1

In sub-clause (2), for the words "It shall come into force at once", the words "It shall be deemed to have come into force from the first day of November, 1990" shall be substituted.

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ತಿದ್ದುಪಡಿಗೆ ಅನುಮೋದನೆ ದೊರಕಿತು.

ಅಧ್ಯಕ್ಷರು : ಪ್ರಸ್ತಾವ ಹೀಗಿದೆ:"ತಿದ್ದುಪಡಿಯಾದ 1ನೇ ಖಂಡವು ವಿಧೇಯಕದ ಅಂಗವಾಗಿರಬೇಕು."

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು)

ತಿದ್ದುಪಡಿಯಾದ ೧ನೇ ಖಂಡವು ವಿಧೇಯಕದ ಅಂಗವಾಯಿತು.

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ ತಿದ್ದುಪಡಿಯಾದಂತೆ ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

(ಪ್ರಸ್ತಾವವನ್ನು ಅಂಗೀಕರಿಸಲ್ಪಟ್ಟಿತು)

(ಮೊದಲನೆ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

ಅಂಗೀಕಾರ ಪ್ರಸ್ತಾವ

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಅಧ್ಯಕ್ಷರೆ, 1990ನೇ ಇಸವಿಯ ಕರ್ನಾಟಕ ಸಚಿವರ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ.

"1990ನೇ ಇಸವಿಯ ಕರ್ನಾಟಕ ಸಚಿವರ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು. ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ವಿಷಯ : ಮಂಡಲ ಪಂಚಾಯತ್ ಮತ್ತು ಜಿಲ್ಲಾ ಪರಿಷತ್ ತಿದ್ದುಪಡಿ ಮಸೂದೆ ಬಗ್ಗೆ ಪ್ರಸ್ತಾಪ